O.S. NO. 264/2023

DW - 1 .

Dated 04-08-2026.

ಸಾಕ್ಷಿಯನ್ನು ಈ ದಿನ ದಿನಾಂಕ 04-08-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿ ಪರವಾಗಿ ಶ್ರೀ ಎಸ್ ವಿ ಎಸ್ ವಕೀಲರಿಂದಃ

ನನ್ನ ವಯಸ್ಸಿನ ಕುರಿತು ಯಾವುದಾದರು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಮಾಡಿರುತ್ತೇನೆ. ವಾದಿ ದೊಡ್ಡವನೊ ನಾನು ದೊಡ್ಡವನೊ ಎಂದರೆ ಆತ ಯಾರು ಎಂದು ನಮಗೆ ಗೊತ್ತಿರುವುದಿಲ್ಲ ಮತ್ತು ಸಂಬಂಧ ಇರುವುದಿಲ್ಲ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿ ನನ್ನ ತಂದೆ ಎಂದರೆ ನಿಜ. ನನ್ನ ತಂದೆಗೆ ವಯಸ್ಸು ಬಹಳ ಆಗಿದ್ದರಿಂದ ಅವರ ಪರವಾಗಿ ಸಹ ನಾನೇ ಸಾಕ್ಷಿ ನುಡಿಯುತ್ತಿದ್ದೇನೆ. ನನ್ನ ತಂದೆಗೆ ಕರೆದುಕೊಂಡು ಬಂದು ಸಾಕ್ಷಿ ಹೇಳಿಸಿದರೆ ನಿಜ ಸಂಗತಿ ಹೊರಗೆ ಬರುತ್ತದೆ ಅಂತಾ ಉದ್ದೇಶ ಪೂರ್ವಕವಾಗಿ ಅವರ ಪರವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಪಾಲು ಕೊಡಬಾರದು ಎಂದು ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಲಿಖಿತ ಹೇಳಿಕೆ ಸಲ್ಲಿಸುವ ಸಮಯದಲ್ಲಿ ವಾದಿಯ ಶಾಲಾ ಪ್ರಮಾಣಪತ್ರ ಹಾಜರು ಮಾಡಿರುತ್ತೇವೆ ಎಂದರೆ ಸರಿ. ಪ್ರಸ್ತುತ ದಾವೆ ವಾದಿ ತನ್ನ ತಂದೆ ಆಸ್ತಿಯಲ್ಲಿ ಪಾಲು ಬೇಕು ಎಂದು ಸಲ್ಲಿಸಿರುತ್ತಾರೆ ಎಂದರೆ ವಾದಿ ನಮ್ಮ ಕುಟುಂಬಕ್ಕೆ ಸಂಬಂಧ ಇರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಯಾವುದೇ ಪಿತ್ರಾರ್ಜಿತ ಆಸ್ತಿ ಗಳು ಇರುವುದಿಲ್ಲ.

O.S. NO. 264/2023

DW - 1 .

Dated 04-08-2026.

ನನ್ನ ತಂದೆಯ ಕುಟುಂಬದ ಮೂಲ ಪುರುಷ ಚಿನಗುಡೆಪ್ಪ ಎಂದರೆ ನಿಜ. ಸಾಕ್ಷಿ ಮುಂದುವರೆದು ಅವರು ನನ್ನ ಅಜ್ಜ ಇರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಚಿನಗುಡೆಪ್ಪ ರವರಿಗೆ ರುದ್ರಮ್ಮ ಎಂಬ ಹೆಂಡತಿ ಇದ್ದಳು, ಅವರಿಬ್ಬರಿಗೆ ಅಡಿವೆಪ್ಪ ಶಿವನಪ್ಪ, ಮಲ್ಲಪ್ಪ, ನಾಗಪ್ಪ ಮತ್ತು ವೀರಬದ್ರಪ್ಪ ಎಂಬ ಮಕ್ಕಳು ಎಂದರೆ ಸರಿ. ದಾವಾ ಆಸ್ತಿ ಕುರಿತು ನನ್ನ ತಂದೆ ಮತ್ತು ಆತನ ಸಹೋದರರ ಮಧ್ಯೆ ಈಗಾಗಲೇ ವಾಟ್ನಿ ಆಗಿರುತ್ತದೆ ಎಂದರೆ ಸರಿ.

ನನ್ನ ತಂದೆಗೆ ಚನ್ನವ್ವ ಮತ್ತು ಸಿಂಗವ್ವ ಎಂಬ ಇಬ್ಬರು ಹೆಂಡತಿಯರು ಎಂದರೆ ಸುಳ್ಳು. ವಾದಿ ನನ್ನ ತಂದೆಯ ಕಾಯ್ದೆ ಬದ್ಧವಾಗಿ ಜನಿಸಿದ ಮಗ ಇರುತ್ತಾನೆ ಎಂದರೆ ಸುಳ್ಳು. ಚನ್ನವ್ವ ಮತ್ತು 1 ನೇ ಪ್ರತಿವಾದಿ ಮಧ್ಯೆ ಯಾವುದೇ ರೀತಿ ಮದುವೆ ಆಗಿರುವುದಿಲ್ಲ. 2 ನೇ ಪ್ರತಿವಾದಿ ಚನ್ನವ್ವ 1 ನೇ ಪ್ರತಿವಾದಿಯ ಕಾಯ್ದೆ ಬದ್ಧ ಹೆಂಡತಿ ಇರುತ್ತಾಳೆ ಎಂದು ನಿಜ ಸಂಗತಿ ಗೊತ್ತಾಗುತ್ತದೆ ಅಂತಾ 1 ನೇ ಪ್ರತಿವಾದಿಯ ಸಾಕ್ಷಿ ಮಾಡಿಸುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿ ಮತ್ತು 2 ನೇ ಪ್ರತಿವಾದಿಯರು ಪಾಲು ಕೇಳುತ್ತಾರೆ ಎಂಬ ಉದ್ದೇಶದಿಂದ ದಾವಾ ಆಸ್ತಿಗಳನ್ನು ನಮ್ಮ ಹೆಸರಿಗೆ ಹಚ್ಚಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದರಂತೆ ಹಕ್ಕು ದಾಖಲಾತಿಗಳು ನಮ್ಮ ಹೆಸರಿಗೆ ದಾಖಲಾಗಿರುತ್ತವೆ ಎಂದರೆ ಸಾಕ್ಷಿ ಅವರು ನಮ್ಮ ಕುಟುಂಬಕ್ಕೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಹಕ್ಕು ಬದಲಾವಣೆಗೆ ವಾದಿ ತಹಶಿಲ್ದಾರ ಕಚೇರಿಯಲ್ಲಿ ನಿಪಿ-6 ರಂತೆ ತಕರಾರು

O.S. NO. 264/2023

DW - 1 .

Dated 04-08-2026.

ಅರ್ಜಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು 2 ನೇ ಪ್ರತಿವಾದಿಯರು ನನ್ನ ತಂದೆ ವಿರುದ್ಧ ಪೊಲಿಸ ಠಾಣೆಯಲ್ಲಿ ನಿಪಿ - 7 ರಂತೆ ದೂರು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ದೂರು ಸಲ್ಲಿಸಿರುವುದು ಗೊತ್ತಿದೆ ಎಂದು ನುಡಿದಿರುತ್ತಾರೆ. ಈಗ ತೊರಿಸಿದ ನಿಪಿ - 8 ರ ಭಾವಚಿತ್ರಗಳಲ್ಲಿ ನನ್ನ ತಂದೆ ಇರುವುದಿಲ್ಲ. ವಾದಿ ತಾನು 1 ನೇ ಪ್ರತಿವಾದಿಯ ಕಾಯ್ದೆ ಬದ್ಧ ಮಗ ಎಂದು ತೊರಿಸಲು ನಿಪಿ - 9 ಆಧಾರ ಕಾರ್ಡ ಹಾಜರು ಪಡಿಸಿರುತ್ತಾರೆ ಎಂದರೆ ಅದು ಸುಳ್ಳು ಇರುತ್ತದೆ. ಅದೇ ರೀತಿ ನಿಪಿ - 10 ಸಹ ಹಾಜರುಪಡಿಸಿರುತ್ತಾನೆ ಎಂದರೆ ಅದು ಸುಳ್ಳು ಇದೆ. ಅದೇ ರೀತಿ 10 ರಿಂದ 17 ದಾಖಲಾತಿಗಳನ್ನು ಹಾಜರುಪಡಿಸಿರುತ್ತಾನೆ ಎಂದರೆ ಅವು ಖೊಟ್ಟಿ ಪೊರ್ಜರಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ದಾಖಲಾತಿಗಳು ಪೊರ್ಜರಿ ಇರುತ್ತವೆ ಎಂದು ಪೊಲಿಸ ದೂರು ಕೊಟ್ಟಿದ್ದೀರಾ ಎಂದರೆ ಆ ಕುರಿತು ನಮಗೆ ಮಾಹಿತಿ ಇರಲಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾಖಲಾತಿಗಳು ಪೊರ್ಜರಿ ಇವೆ ಅಂತಾ ವಾದಿಯ ಮತ್ತು 2ನೇ ಪ್ರತಿವಾದಿ ಮೇಲೆ ಪೊಲಿಸ ಠಾಣೆಯಲ್ಲಿ ದೂರು ಕೊಡಲು ತೊಂದರೆ ಇರಲಿಲ್ಲ ಎಂದರೆ ಸದರಿ ದಾಖಲಾತಿಗಳ ಬಗ್ಗೆ ದಾವೆ ದಾಖಲಾಗುವವರೆಗೆ ಗೊತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯಲ್ಲಿ ಪಾಲು ಕೊಡುವುದು ಬರುತ್ತದೆ ಅಂತಾ ನಿಪಿ-21 ರಲ್ಲಿ ಕಾಣಿಸಿದಂತೆ ಬೇರೆಯರಿಗೆ ಖರೀದಿ ಕರಾರು ಪತ್ರ ಮಾಡಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮುನವಳ್ಳಿ ಬಸ ಸ್ಟಾಂಡ ಹತ್ತಿರ ಇದ್ದು ಮಾರಾಟವಾಗುವ ಆಸ್ತಿ ಇರುತ್ತದೆ ಎಂದರೆ ಸಾಲ ಇರುವುದರಿಂದ ನಮ್ಮ ಆಸ್ತಿ ಮಾರಾಟ ಮಾಡುತ್ತಿದ್ದೇನೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿ ಕಿಮ್ಮತ್ತು ಹೆಚ್ಚು

O.S. NO. 264/2023

DW - 1 .

Dated 04-08-2026.

ಇರುವುದರಿಂದ ವಾದಿಗೆ ದಾವಾ ಆಸ್ತಿಯಲ್ಲಿ ಪಾಲು ಕೊಡಬಾರದು ಅಂತಾ ಸುಳ್ಳು ಸಾಧಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಊರ ಹಿರಿಯರ ಸಮಕ್ಷಮ 2 ನೇ ಪ್ರತಿವಾದಿಗೆ ದಾವಾ ಆಸ್ತಿ ಕುರಿತು ಹಕ್ಕು ಬಿಟ್ಟ ಪತ್ರ ಮಾಡಿಕೊಟ್ಟಿರುತ್ತಾನೆ ಎಂದರೆ ಸುಳ್ಳು. ಆ ಸಮಯದಲ್ಲಿ ನಾನು ಹಾಜರು ಇರಲಿಲ್ಲ ಹೀಗಾಗಿ ನನಗೆ ಸದರಿ ವಿಷಯದ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜನ್ಮ ದಿನಾಂಕ 01-06-1993 ಇರುತ್ತದೆ. ಆ ಕುರಿತು ದಾಖಲೆ ಹಾಜರು ಮಾಡಿದ್ದಿರಾ ಎಂದರೆ ಮಾಡಬಲ್ಲೆ. 2ನೇ ಪ್ರತಿವಾದಿ 1ನೇ ಪ್ರತಿವಾದಿಯ ಜೊತೆ ಮದುವೆ ಆಗಿರುವುದು 1ನೇ ಪ್ರತಿವಾದಿಗೆ ಮಾತ್ರ ಗೊತ್ತಿರುತ್ತದೆ, ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪರವಾಗಿ ಯಾವುದೇ ದಾಖಲಾತಿಗಳು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿ ಮತ್ತು 2 ನೇ ಪ್ರತಿವಾದಿಗೆ ಹಿಸ್ಸಾ ಹಕ್ಕು ಇದ್ದರು ಸಹ ಅವರಿಗೆ ಪಾಲು ಕೊಡಬಾರದು ಎಂಬ ಉದ್ದೇಶದಿಂದ ಖೊಟ್ಟಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿ ಮತ್ತು ನಾವು ಎಲ್ಲರೂ ಸಾಮೂಹಿಕ ಸಾಗುವಳಿ ಮಾಡುತ್ತಾ ಕಬ್ಜಾ ವಹಿವಾಟ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರು ವಾದಿ ಪರ ವಕೀಲರು ಮಾಡಿದ ಪಾಟಿ ಸವಾಲು ಅವವಡಿಸಿಕೊಂಡಿರುತ್ತಾರೆ.

O.S. NO. 264/2023

DW - 1 .

Dated 04-08-2026.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.